## ▶ಎನ್ಐಟಿಕೆಯಲ್ಲಿ ಸಂಸ್ಥಾಪನ ದಿನಾಚರಣೆ

# ‘ಶ್ರೀನಿವಾಸ ಮಲ್ಯರು ಜಿಲ್ಲೆಗೆ ನೀಡಿದ ಕೊಡುಗೆ ಅನನ್ಯ’



**ಸುರತ್ಕಲ್, ಆ. 7:** ಎನ್ಐಟಿಕೆಯಲ್ಲಿ 64ನೇ ಸಂಸ್ಥಾಪನ ದಿನವನ್ನು ಆಚರಿಸಲಾಯಿತು. ಶ್ರೀನಿವಾಸ ಮಲ್ಯ ಅವರ ಪ್ರತಿಮೆಗೆ ಪುಷ್ಪ ಗೌರವ ಸಲ್ಲಿಸಿ ಬಳಿಕ ನೂತನ ನಿರ್ದೇಶಕ ಪ್ರೊ| ಬಿ. ರವಿ ಸಂಸ್ಥೆಯ ಧ್ವಜಾರೋಹಣ ನೆರವೇರಿಸಿದರು.

ಜಿಲ್ಲೆಯ ಅಭಿವೃದ್ಧಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ಮಲ್ಯ ಅವರು ಆಧುನಿಕ ಶಿಲ್ಪಿಯಾಗಿ ಮೂಡಿ ಬಂದ ಬಗ್ಗೆ ಸ್ಮರಿಸಿಕೊಂಡರು.

ಕೆಆರ್ಇಸಿ ಇಂದು ಎನ್ಐಟಿಕೆ ಆಗಿ ಮೇಲ್ದರ್ಜೆಗೆ ಏರಿದೆ, ನವಮಂಗಳೂರು ಬಂದರು, ಬಜಪೆ ವಿಮಾನನಿಲ್ದಾಣ, ಮಂಗಳೂರು - ಹಾಸನ - ಬೆಂಗಳೂರು ರೈಲುಮಾರ್ಗ, ಮುಂಬಯಿ - ಕೊಚ್ಚಿ ಮತ್ತು ಮಂಗಳೂರು - ಬೆಂಗಳೂರು ಹೆದ್ದಾರಿಗಳು, ನೇತ್ರಾವತಿಯ ಉಳ್ಳಾಲ ಸೇತುವೆ ಮತ್ತು ಇತರ ಪ್ರಮುಖರ ನಿರ್ಮಾಣಗಳಲ್ಲಿ ಜಿಲ್ಲೆಯನ್ನು ಏಳಿಗೆ ಯತ್ತಕೊಂಡೊಯ್ಯುವ ಕೆಲಸಗಳನ್ನು ಅವರು ಮಾಡಿದ್ದಾರೆ. ಇದು ಜಿಲ್ಲೆಯ ಜನತೆಗೆ ನೀಡಿದ ಅಪಾರ ಕೊಡುಗೆ ಎಂದು ಹೇಳಿದರು.

ವಿದ್ಯಾರ್ಥಿ ಪರಮವಿಶಿಷ್ಟ ಸೇವಾಪದ ಪುರಸ್ಕೃತ ನಿವೃತ್ತ ಏರ್ ಮಾರ್ಷೆಲ್ ಚೆಂಗಪ್ಪ ಅವರು ಸೇನಾ ವ್ಯವಸ್ಥೆ, ಕಾರ್ಯಾಚರಣೆ ಕುರಿತ ಅನುಭವ ವ್ಯಕ್ತ ಪಡಿಸಿದರು. ಇದೇ ಸಂದರ್ಭ ಎನ್ಐಟಿಕೆ ಜಾಗತಿಕ ಸಮಾವೇಶದ ಸ್ಮರಣಿಕೆಯನ್ನು ಬಿಡುಗಡೆ ಮಾಡಲಾಯಿತು.

### ವಿದ್ಯಾರ್ಥಿವೇತನ ವಿತರಣೆ

ಶೈಕ್ಷಣಿಕ ಪ್ರಗತಿ ಸಾಧಿಸಿದ 27 ಮಂದಿಗೆ ಪ್ರಮಾಣಪತ್ರ, ವಿದ್ಯಾರ್ಥಿ ವೇತನವನ್ನು ನೀಡಲಾಯಿತು. 25 ವರ್ಷಗಳ ಸೇವೆಯನ್ನು ಪೂರೈಸಿದ 6 ಅಧ್ಯಾಪಕರು, 11 ಸಿಬಂದಿಯನ್ನು ಗೌರವಿಸಲಾಯಿತು. ಎನ್ಸಿಸಿ ಕೆಡೆಟ್‌ಗಳ ತರಬೇತಿಗಾಗಿ ಕ| ಅನಿಲೇಶ್ ಕೌಶಿಕ್ ಅಧಿಕಾರಿಗಳಿಂದ ನಿರ್ಮಾಣವಾದ ‘ಆರೋ ಹಣ’ ಎಂಬ ಕ್ಲೈಂಬಿಂಗ್ವಾಲ್ ಅನ್ನು ಅನಾವರಣಗೊಳಿಸಲಾಯಿತು. ಅಲುಮ್ನಿ ಅಸೋಸಿಯೇಶನ್ ಎನ್ಐಟಿಕೆ ಸ್ಥಾಪಕ ಅಧ್ಯಕ್ಷ ಯಜ್ಞನಾರಾಯಣ ಕಮ್ಮಾಜೆ, ಉದ್ಯಮಿ ಎ.ಎಸ್. ಕಾರಂತ್, ಪವನಶಕ್ತಿ ಸಲಹೆಗಾರ ಎಂ. ನಿರಂಜನ್ ಮತ್ತಿತರರಿದ್ದರು.

Udayavani, Date:08/08/23, p.no Sudina, 04